ಅ) ಕರ್ನಾಟಕ ವಿದ್ಯುತ್ ನಿಗಮವು ಸಹಾಯಕ ಅಭಿಯಂತರ ಹುದ್ದೆಗೆ ಸಂದರ್ಶನವನ್ನು ನಡೆಸುತ್ತಿದೆಯೇ?

ಆ) ಹಾಗಿದ್ದಲ್ಲಿ ಸಂದರ್ಶನಕ್ಕೆ ಹಾಜರಾದ ಅಭ್ಯರ್ಥಿಗಳ ಸಂಖ್ಯೆ.

ಇ) ಸಂದರ್ಶನ ನಡೆದ ದಿನಾಂಕ.

ಈ) ಆರಿಸಲ್ಪಟ್ಟ ಅಭ್ಯರ್ಥಿಗಳ ಪಟ್ಟಿಯನ್ನು ಸಂದರ್ಶನದ ಬಳಿಕ ಅದೇ ದಿನವೇ ಪ್ರಕಟಿಸಲಾಯಿತೆ?

ಉ) ಇಲ್ಲದಿದ್ದಲ್ಲಿ ಆರಿಸಲ್ಪಟ್ಟ ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸದಿರಲು ಕಾರಣ.

ಊ) ಆಯ್ಕೆ ಮಾಡುವಾಗ ರೋಸ್ಟರ್ ಪದ್ಧತಿಯನ್ನು ಅನುಸರಿಸಲಾಗಿದೆಯೇ?

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಸಚಿವರು):-

ಅ) ಹೌದು.

ಆ) 868.

ಇ) 23ನೇ ಆಗಸ್ಟ್ 1991 ರಿಂದ 27ನೇ ಸೆಪ್ಟೆಂಬರ್ 1991 ರವರೆಗೆ.

ಈ) ಪ್ರತಿಯೊಬ್ಬ ಅಭ್ಯರ್ಥಿ ಸಂದರ್ಶನದಲ್ಲಿ ಗಳಿಸಿದ ಅಂಕಗಳನ್ನು ಸಂದರ್ಶನ ನಡೆದ ಮಾರನೆಯ ದಿನ ಪ್ರಕಟಿಸಲಾಯಿತು.

ಉ) ಈ ಬಗ್ಗೆ ಸಧ್ಯದಲ್ಲಿಯೇ ತೀರ್ಮಾನ ತೆಗೆದುಕೊಳ್ಳಲಾಗುವುದು.

ಊ) ಹೌದು.

ಶ್ರೀಮತಿ ದಮಯಂತಿ ಬೋರೇಗೌಡ:- ಉತ್ತರದಲ್ಲಿ ಇಂಟರ್‌ವ್ಯೂ ಆದ ಮಾರನೆಯ ದಿವಸವೇ ಮಾರ್ಕ್ಸಗಳನ್ನು ಕೊಟ್ಟಿದ್ದೇವೆಂದು ಹೇಳಿದ್ದಾರೆ. ಆದರೆ ಇಷ್ಟು ದಿವಸದವರೆಗೆ ಅದನ್ನು ಅನೌನ್ಸ್ ಮಾಡದೇ ಇರುವುದಕ್ಕೆ ಕಾರಣವೇನು?

ಶ್ರೀ ಎಸ್. ಬಂಗಾರಪ್ಪ:- ಈ ಕರ್ನಾಟಕ ಪವರ್ ಕಾರ್ಪೊರೇಷನ್‌ನಲ್ಲಿರುವ ಖಾಲಿ ಹುದ್ದೆಗಳಿಗೆ ನಡೆದಿರತಕ್ಕಂಥ ಸಂದರ್ಶನ. ಸಂದರ್ಶನವನ್ನು ನಡೆಸುವಂತಹ ಕಾಲದಲ್ಲಿ ಕೆಲವು ರಿಜರ್‌ವೇಷನ್‌ಗಳ ಪ್ರಕಾರ ಮಾಡಬೇಕಾಗುತ್ತದೆ. ಕರ್ನಾಟಕ ಪವರ್ ಕಾರ್ಪೊರೇಷನ್ ಕೂಡ it is a body concerned to the Companies Act. ರಿಜರ್‌ವೇಷನ್ ಪ್ರಕಾರ ಮಾಡಬೇಕೆಂದು ಸದನದಲ್ಲಿ ಎಲ್ಲಾ ಸದಸ್ಯರುಗಳು ಹೇಳಿದ್ದಾರೆ. ಪ್ರತಿಯೊಂದು ಇಲಾಖೆಯಲ್ಲಿಯೂ, ಬೋರ್ಡನಲ್ಲಿಯೂ, ಕಾರ್ಪೊರೇಷನ್‌ನಲ್ಲಿಯೂ ರಿಜರ್‌ವೇಷನ್ ಪ್ರಕಾರ ಮಾಡಬೇಕು. ಇವತ್ತು ಅವರು ಇಂಟರ್‌ವ್ಯೂ ಮಾಡಿದ್ದರೂ ಸರಿಯಿಲ್ಲವೆಂದು ಸರ್ಕಾರದ ಗಮನಕ್ಕೆ ಬಂದಿದೆ. ಅದನ್ನು ನೋಡಿ ಅನಂತರ ತೀರ್ಮಾನ ಮಾಡಬೇಕು ಎನ್ನುವಂತಹ ದೃಷ್ಟಿಯಿಂದ ಅದನ್ನು ಅನೌನ್ಸ ಮಾಡಲಿಲ್ಲ, ಅದಕ್ಕೆ ಮತ್ತೇನೂ ಕಾರಣವಿಲ್ಲ. ಅದರ ಬಗ್ಗೆ ಸೂಕ್ತವಾದಂತಹ ತೀರ್ಮಾನವನ್ನು ಪವರ್ ಕಾರ್ಪೊರೇಷನ್ ವತಿಯಿಂದ ಸಧ್ಯದಲ್ಲಿಯೇ ತೆಗೆದುಕೊಳ್ಳುತ್ತೇವೆ. ತಾವೇನೂ ಅದರ ಬಗ್ಗೆ ಯೋಚನೆ ಮಾಡುವುದು ಬೇಕಾಗಿಲ್ಲ.

ಶ್ರೀ ದಮಯಂತಿ ಬೋರೇಗೌಡ:- ಈಗ ಆರು ತಿಂಗಳಾಗಿದೆ.

ಶ್ರೀ ಎಸ್. ಬಂಗಾರಪ್ಪ:- That is not true. ಅದನ್ನೆಲ್ಲಾ ಸ್ವಲ್ಪ ನೋಡಿಕೊಳ್ಳಬೇಕೆಂಬ ದೃಷ್ಟಿಯಿಂದ ಅದನ್ನು ಹಾಗೆಯೇ ತಡೆಯಿಡಿಯಲಾಗಿದೆ. ಇಲ್ಲದೆ ಇದ್ದರೆ ನಾವು ಅನೌನ್ಸ್ ಮಾಡಿದ ಮೇಲೆ ನಮಗೆ ಅನ್ಯಾಯವಾಗಿದೆ, ನಮಗೆ ಅನ್ಯಾಯವಾಗಿದೆ ಎಂದು ಬೇರೆ ವರ್ಗದ ಜನ ಹೇಳುತ್ತಾರೆ.

ಪಶ್ಚಿಮ ಘಟ್ಟಗಳ ಸರಹದ್ದಿನಲ್ಲಿ ಸಣ್ಣ ವಿದ್ಯುತ್ ಉತ್ಪಾದನಾ ಘಟಕ

128 (874). ಶ್ರೀ ಜಿ.ಎಸ್. ಆಚಾರ್ (ಬೈಂದೂರು):- ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಪಶ್ಚಿಮ ಘಟ್ಟಗಳ ಸರಹದ್ದಿನಲ್ಲಿ ಅನೇಕ ಚಿಕ್ಕ ಪ್ರಾತಗಳಿದ್ದು ಅಲ್ಲಿ ಮಿನಿ ವಿದ್ಯುತ್ ಉತ್ಪಾದನಾ ಘಟಕಗಳನ್ನು ಸ್ಥಾಪಿಸಲು ಸರ್ಕಾರ ಉದ್ದೇಶಿಸಿದೆಯೇ?

ಅ) ಈ ಕುರಿತು ಅನ್ವೇಷಣಾ ಕಾರ್ಯ ಜರುಗಿದೆಯೇ?

ಇ) ಸರ್ಕಾರದ ಅಂತಿಮ ತೀರ್ಮಾನವೇನು?

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು):-

ಅ) ಹೌದು.

ಆ) ಹೌದು.

ಇ) ಯೋಜನಾ ಸ್ಥಳದ ವಿವರವಾದ ಅನ್ವೇಷಣೆಯನ್ನು ಮಾಡಿದ ನಂತರ ಸಾಧ್ಯ ಅಸಾಧ್ಯತೆ ಮತ್ತು ಆರ್ಥಿಕ ದೃಷ್ಟಿಯಿಂದ ಪರಿಶೀಲಿಸಿ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲಾಗುವುದು.

ಶ್ರೀ ಜಿ.ಎಸ್. ಲಚಾರ್:- ಮಾನ್ಯ ಉಪಾಧ್ಯಕ್ಷಿಣಿಯವರೆ, ಪಶ್ಚಿಮಘಟ್ಟಗಳ ಸರಹದ್ದಿನಲ್ಲಿ ಅನೇಕ ಜಲಪಾತಗಳು ಇವೆ. ಆದರಲ್ಲಿ ಮಿನಿ ಮತ್ತು ಮೈಕ್ರೊ ವಿದ್ಯುತ್ ಸ್ಥಾವರವನ್ನು ಸ್ಥಾಪಿಸಲಿಕ್ಕೆ ಅನ್ವೇಷಣೆ ನಡೆದಿದೆಯೇ ಎಂದು ಕೇಳಿದ್ದಕ್ಕೆ 'ಹೌದು' ಎಂದು ಹೇಳಿದ್ದಾರೆ. ಸರ್ಕಾರದ ಅಂತಿಮ ತೀರ್ಮಾನ ಏನು? ಅನ್ವೇಷಣೆ ಆಗಿದ್ದರೆ ಏನಾದರೂ ತೀರ್ಮಾನ ಆಗಬೇಕಾಗಿತ್ತು. ಪುನಃ ಅನ್ವೇಷಣೆ ಆಗಬೇಕೆಂದು ಉತ್ತರ ಬಂದಿದೆ. ಎಷ್ಟು ಕಡೆ ಅನ್ವೇಷಣೆಯಾಗಿದೆ, ಈ ಅನ್ವೇಷಣೆಗೆ ಇನ್ನು ಎಷ್ಟು ಸಮಯಬೇಕು. ಅನ್ವೇಷಣೆಯ ನಂತರ, ಸ್ಥಾವರವನ್ನು ಸ್ಥಾಪಿಸುವುದಕ್ಕೆ ಸರ್ಕಾರವೇ ಮನಸ್ಸು ಮಾಡುತ್ತಿದೆಯೇ? ಅಥವಾ ಖಾಸಗಿ ಉದ್ದಿಮೆಗಳಿಗೆ ಅವಕಾಶ ನೀಡುತ್ತೀರಾ? ಆವರಿಗೆ ಏನೇನು ನೆರವು ಕೊಡುತ್ತೀರೆಂದು ಕೇಳಲಿಕ್ಕೆ ಬಯಸುತ್ತೇನೆ.

ಶ್ರೀ ಎಂ. ರಾಮಪ್ಪ:- 15 ಏರಿಯಾಗಳಲ್ಲಿ ನಾವು ಅನ್ವೇಷಣೆ ನಡೆಸಿದ್ದೇವೆ. ಯಾವ 'ಏಜೆನ್ಸಿ' ಮಾಡಬೇಕೆನ್ನುವುದರ ಬಗ್ಗೆ ಇಷ್ಟರಲ್ಲಿಯೇ ನಿರ್ಣಯ ಮಾಡಬೇಕಾಗುತ್ತದೆ. ನಂತರ, ಕೆಲಸ ಮಾಡುವುದಕ್ಕೆ ಮುಂದಿನ ಕ್ರಮ ತೆಗೆದುಕೊಂಡು ನಾವು ಬೋರ್ಡಿಗೆ ತಿಳಿಸುತ್ತೇವೆ.

(ಉತ್ತರ ಲಗತ್ತಿಸಲಾಗಿದೆ)

ಮೂಡಿಗೆರೆ ತಾಲ್ಲೂಕಿನಲ್ಲಿ ಏಕೋಪಾಧ್ಯಾಯರ ಶಾಲೆಗಳ ಸಂಖ್ಯೆ

129 (1059). ಶ್ರೀಮತಿ ಮೋಟಮ್ಮ (ಮೂಡಿಗೆರೆ):- ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನಲ್ಲಿ ಎಷ್ಟು ಏಕೋಪಾಧ್ಯಾಯರ ಶಾಲೆಗಳಿವೆ?

ಆ) ಈ ಶಾಲೆಗಳಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು?

ಇ) ಈ ಶಾಲೆಗಳಲ್ಲಿ ಶಿಕ್ಷಕರ ಸಂಖ್ಯೆಯನ್ನು ಹೆಚ್ಚಿಸುವ ಉದ್ದೇಶ ಸರ್ಕಾರಕ್ಕಿದೆಯೇ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು):-

ಅ) ಒಂದು ಏಕೋಪಾಧ್ಯಾಯ ಶಾಲೆ ಇದೆ.

ಆ) 63.

ಇ) ಇದೆ.

ಶ್ರೀಮತಿ ಮೋಟಮ್ಮ:- ಮಾನ್ಯ ಉಪಾಧ್ಯಕ್ಷಿಣಿಯವರೆ, ನನ್ನ ಪ್ರಶ್ನೆ ಹೀಗಿದೆ: ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆ ತಾಲ್ಲೂಕಿನಲ್ಲಿ ಎಷ್ಟು ಏಕೋಪಾಧ್ಯಾಯ ಶಾಲೆಗಳಿವೆ? ಎಂದರೆ, ಒಂದು ಶಾಲೆ ಇದೆಯೆಂದು ಉತ್ತರ ಕೊಟ್ಟಿದ್ದಾರೆ. ಹಾಗೆಯೇ ಆ ಶಾಲೆಯಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ ಕೇವಲ 63 ಎಂದು ಹೇಳಿದ್ದಾರೆ. ತಮಗೆ ಗೊತ್ತಿರುವ ಹಾಗೆ ನಮ್ಮದು ಮಲೆನಾಡು ಪ್ರದೇಶ. ಜೊತೆಗೆ ಆ ಶಾಲೆಗಳು ಮೂಲೆ, ಮೂಲೆಗಳಲ್ಲಿ ಇರುತ್ತವೆ. ಆದ್ದರಿಂದ, ಒಂದು ಏಕೋಪಾಧ್ಯಾಯ ಶಾಲೆ ಇರಲಿಕ್ಕೆ ಸಾಧ್ಯವಿಲ್ಲ. ನನಗೆ ಗೊತ್ತಿರುವ ಹಾಗೆ ಈ ತರಹ ಏಕೋಪಾಧ್ಯಾಯ ಶಾಲೆಗಳು ಸಾಕಷ್ಟಿವೆ. ಸರ್ಕಾರದವರು ಶಾಲೆಗಳು ಒಂದು ಕಡೆ, ಬ್ಲಾಕ್‌ಬೋರ್ಡ್ ಶಾಲೆಗಳನ್ನು ಇನ್ನೊಂದು ಕಡೆ ಕಟ್ಟಿದ್ದಾರೆ. ಶಾಲೆಗಳು ಒಂದು ಕಡೆ ಇದ್ದರೆ, ಬ್ಲಾಕ್‌ಬೋರ್ಡ್ ಶಾಲೆಗಳ ಕಟ್ಟಡ ಇನ್ನೊಂದು ಕಡೆ ಇದೆ. ಹಾಗಾಗಿ